ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ
"ಜ್ಞಾನ ಸಾಗರ" ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ - 583 105
VIJAYANAGARA SRI KRISHNADEVARAYA UNIVERSITY
"Jnana Sagara" Campus, Vinayaka Nagara, Cantonment, Ballari - 583 105

ಕುಲಸಚಿವರು
☎ 08392-242703
08392-242097

ಸಂಖ್ಯೆ:ವಿಶ್ರೀಕೃವಿಬ/ವಿ.ಮಂ.ವಿ/ಸುತ್ತೋಲೆ/2020-21/1227 ದಿನಾಂಕ: 30.09.2020

## ಪರಿಷ್ಕೃತ ಅಧಿಸೂಚನೆ

**ವಿಷಯ:** ವಿಶ್ವವಿದ್ಯಾಲಯದ 2020-21 ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ಪದವಿ ಪ್ರವೇಶಾತಿ ಕುರಿತು.

**ಉಲ್ಲೇಖ:** 1. ಸಂಖ್ಯೆ: ವಿಶ್ರೀಕೃವಿಬ/ವಿ.ಮಂ.ವಿ/ಸುತ್ತೋಲೆ/2020-21/710, ದಿನಾಂಕ: 25.07.2020

2. ಸಂಖ್ಯೆ: ವಿಶ್ರೀಕೃವಿಬ/ವಿ.ಮಂ.ವಿ/ಸುತ್ತೋಲೆ/2020-21/961(A), ದಿನಾಂಕ: 29.08.2020
3. UGC Guidelines on Academic Calender for the First Year of Under-Graduate and Post-Graduate Students of the Universities for the Session 2020-21in View of COVID-19 Pandemic, September 2020.
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 30.09.2020.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳನ್ವಯ, ವಿಶ್ವವಿದ್ಯಾಲಯದ 2020-21ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿ ಪ್ರವೇಶಾತಿಗೆ ವೇಳಾಪಟ್ಟಿಯನ್ನು ಈ ಕೆಳಗಿನಂತೆ ರಚಿಸಿ ಅಧಿಸೂಚನೆಯನ್ನು ಹೊರಡಿಸಲಾಗಿದೆ.

| ಕ್ರ.ಸಂ. | ವಿವರ | | ಪರಿಷ್ಕೃತ ದಿನಾಂಕ |
|---|---|---|---|
| 1. | ಸ್ನಾತಕ ಕೋರ್ಸುಗಳ ಸೆಮಿಸ್ಟರ್‌ವಾರು ಪ್ರವೇಶ ಪ್ರಕ್ರಿಯೆ ಪ್ರಾರಂಭಾವಧಿ | ಪ್ರಥಮ ಸೆಮಿಸ್ಟರ್ | ಪಿ.ಯು.ಸಿ. ಫಲಿತಾಂಶ ಪ್ರಕಟಣೆಗೊಳಿಸಿದ ಒಂದು ವಾರದ ನಂತರದಿಂದ |
| | | ಮೂರನೇ ಮತ್ತು ಐದನೇ ಸೆಮಿಸ್ಟರ್ | 25.07.2020 |
| 2. | 1ನೇ 3ನೇ ಮತ್ತು 5ನೇ ಸೆಮಿಸ್ಟರ್‌ನ ಪ್ರವೇಶಾತಿಗೆ ದಂಡರಹಿತ ಕೊನೆಯ ದಿನಾಂಕ | | 20.09.2020 |
| 3. | 1ನೇ, 3ನೇ ಮತ್ತು 5ನೇ ಸೆಮಿಸ್ಟರ್‌ಗೆ ದಂಡರಹಿತ ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿ ಹಾಗೂ ಶುಲ್ಕವನ್ನು ವಿ.ವಿ.ಗೆ ಸಲ್ಲಿಸಲು ಕೊನೆಯ ದಿನಾಂಕ | | 26.09.2020 |
| 4. | **1ನೇ, 3ನೇ ಮತ್ತು 5ನೇ ಸೆಮಿಸ್ಟರ್‌ಗೆ ರೂ.500/- ದಂಡಸಹಿತ ಶುಲ್ಕದೊಂದಿಗೆ ಪ್ರವೇಶ ಪಡೆಯಲು ಕೊನೆಯ ದಿನಾಂಕ** | | **12.10.2020** |
| 5. | 3ನೇ ಮತ್ತು 5ನೇ ಸೆಮಿಸ್ಟರ್‌ಗೆ ಅಂತರ್ ಮಹಾವಿದ್ಯಾಲಯ ವರ್ಗಾವಣೆಗೆ ಕೊನೆಯ ದಿನಾಂಕ | | **16.10.2020** |
| 6. | 1ನೇ, 3ನೇ ಮತ್ತು 5ನೇ ಸೆಮಿಸ್ಟರ್‌ಗೆ ದಂಡಸಹಿತವಾಗಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿ ಹಾಗೂ ಶುಲ್ಕವನ್ನು ವಿ.ವಿ.ಗೆ ಸಲ್ಲಿಸಲು ಕೊನೆಯ ದಿನಾಂಕ | | **20.10.2020** |
| 7. | **3ನೇ ಮತ್ತು 5ನೇ ಸೆಮಿಸ್ಟರ್‌ನ Online ತರಗತಿಗಳ ಪ್ರಾರಂಭ** | | **15.10.2020** |
| 8. | **1ನೇ, 3ನೇ ಮತ್ತು 5ನೇ ಸೆಮಿಸ್ಟರ್‌ನ Offline ತರಗತಿಗಳ ಪ್ರಾರಂಭ** | | **02.11.2020** |

| | | |
|---|---|---|
| 9. | 3ನೇ ಮತ್ತು 5ನೇ ಸೆಮಿಸ್ಟರ್‌ನ ಅಂತರ್ ಮಹಾವಿದ್ಯಾಲಯ ವರ್ಗಾವಣೆಯ ವಿದ್ಯಾರ್ಥಿಗಳ ವಿವರಗಳನ್ನು ಸಲ್ಲಿಸಲು ಕೊನೆಯ ದಿನಾಂಕ | 13.11.2020 |
| 10. | 1ನೇ, 3ನೇ ಮತ್ತು 5ನೇ ಸೆಮಿಸ್ಟರ್‌ನ ದಂಡರಹಿತ ಮತ್ತು ದಂಡಸಹಿತ ಕೋರ್ಸ್‌ವಾರು ಪ್ರವೇಶ ಪಡೆದ ವಿದ್ಯಾರ್ಥಿಗಳ ಹೆಸರುಗಳನ್ನು Online ನಲ್ಲಿ ಹಾಗೂ ಇತರೆ ಅನುಬಂಧಗಳಲ್ಲಿ ಭರ್ತಿಮಾಡಿದ ಮುದ್ರಣದ 04 ಪ್ರತಿಯಲ್ಲಿ ಹಾಗೂ Soft copy (CD) /Pen drive ಮತ್ತು ನೋಂದಣಿ/ಇತರೆ ಶುಲ್ಕದ ಚಲನ್‌ಪ್ರತಿ ಅಥವಾ ಡಿ.ಡಿ. ಯನ್ನು ಲಗತ್ತಿಸಿ ಅವಶ್ಯಕ ಶೈಕ್ಷಣಿಕ ದಾಖಲೆಗಳನ್ನು ಬಾಕ್ಸ್ ಫೈಲ್‌ನಲ್ಲಿ ಜೋಡಿಸಿ, ವಿಶ್ವವಿದ್ಯಾಲಯವು ಅಂತರ್ಜಾಲದಲ್ಲಿ ಒದಗಿಸುವ ವೇಳಾಪಟ್ಟಿ ಅನುಗುಣವಾಗಿ ಖುದ್ದಾಗಿ ಬಂದು ತಮ್ಮ ಸದರಿ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ವಿಶ್ವವಿದ್ಯಾಲಯದಿಂದ ದೃಢೀಕರಿಸಿಕೊಳ್ಳುವುದು. | 14.11.2020<br>ರಿಂದ<br>27.11.2020 |
| 11. | 1ನೇ, 3ನೇ ಮತ್ತು 5ನೇ ಸೆಮಿಸ್ಟರ್‌ನ ಆಂತರಿಕ ಪರೀಕ್ಷೆಗಳ (IA) ಅಂಕಪಟ್ಟಿಗಳನ್ನು ವಿ.ವಿ.ಗೆ ಸಲ್ಲಿಸಲು ಕೊನೆಯ ದಿನಾಂಕ | 10.02.2021 |
| 12. | 1ನೇ, 3ನೇ ಮತ್ತು 5ನೇ ಸೆಮಿಸ್ಟರ್‌ನ ಕೊನೆಯ ದಿನಾಂಕ | 20.02.2021 |
| 13. | ಪರೀಕ್ಷಾ ಪೂರ್ವ ತಯಾರಿ/ಮಧ್ಯಮ ಅವಧಿ ರಜೆ | 21.02.2021<br>ರಿಂದ<br>28.02.2021 |
| 14. | 1, 3, 5ನೇ ಸೆಮಿಸ್ಟರ್ ಪರೀಕ್ಷೆ/ ಮೌಲ್ಯಮಾಪನ ಇತ್ಯಾದಿ/ ಫಲಿತಾಂಶ ಪ್ರಕಟಣೆ | 01.03.2021<br>ರಿಂದ<br>31.03.2021 |
| 15. | 2, 4 ಮತ್ತು 6ನೇ ಸೆಮಿಸ್ಟರ್ ಸ್ನಾತಕ ಕೋರ್ಸ್‌ಗಳ ತರಗತಿಗಳ ಪ್ರಾರಂಭದ ದಿನಾಂಕ | 01.04.2021 |
| 16. | 2, 4 ಮತ್ತು 6ನೇ ಸೆಮಿಸ್ಟರ್ ಸ್ನಾತಕ ಕೋರ್ಸ್‌ಗೆ ಸಂಬಂಧಿಸಿದ ಮುಂದಿನ ವೇಳಾ ಪಟ್ಟಿಯನ್ನು ನಂತರದ ದಿನಗಳಲ್ಲಿ ತಿಳಿಸಲಾಗಿವುದು | |

30/09/2020

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
2. ಕುಲಸಚಿವರು(ಮೌಲ್ಯಮಾಪನ), ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
3. ಹಣಕಾಸು ಅಧಿಕಾರಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
4. ಎಲ್ಲಾ ನಿಕಾಯಗಳ ಡೀನರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
5. ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಘಟಕ, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು(ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
7. ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ.
8. ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಎಲ್ಲಾ ಸ್ನಾತಕ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳನ್ನೊಳಗೊಂಡಂತೆ.
9. ಕಛೇರಿ ಪ್ರತಿ.

ಪ್ರಾಂಶುಪಾಲರುಗಳಿಗೆ/ವಿದ್ಯಾರ್ಥಿಗಳಿಗೆ ಸೂಚನೆಗಳು:

1. ಕೋವಿಡ್–19 (ಕೊರೊನಾ ವೈರಸ್) ನಿಯಂತ್ರಿಸುವ ಪ್ರಯುಕ್ತ ವಿದ್ಯಾರ್ಥಿಗಳು/ಪೋಷಕರು ಪ್ರವೇಶಾತಿ ಸಂದರ್ಭದಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು, ಮಾಸ್ಕ್ ಮತ್ತು ಸ್ಯಾನಿಟೈಸರ್ ಕಡ್ಡಾಯವಾಗಿ ಬಳಸುವ ಬಗ್ಗೆ ಅರಿವು ಮೂಡಿಸಲು ತಿಳಿಸಲಾಗಿದೆ.
2. ಕಡೆಯ ದಿನಾಂಕದ ನಂತರದ ಪ್ರವೇಶಗಳನ್ನು ಮಾನ್ಯ ಮಾಡಲಾಗುವುದಿಲ್ಲ. ಈ ಬಗ್ಗೆ ಪ್ರಾಚಾರ್ಯರು ಕಟ್ಟುನಿಟ್ಟಿನ ನಿಗಾವಹಿಸತಕ್ಕದ್ದು, ಒಂದು ವೇಳೆ ನಿಗದಿತ ವೇಳೆಯ ನಂತರ ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದೇ ಆದಲ್ಲಿ, ಅಂತಹ ವಿದ್ಯಾರ್ಥಿಗಳ ಪ್ರವೇಶವನ್ನು ಅಸಿಂಧುಗೊಳಿಸಲಾಗುವುದು ಹಾಗೂ ಅದಕ್ಕೆ ಆಯಾ ಪ್ರಾಚಾರ್ಯರುಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
3. ವಿದ್ಯಾರ್ಥಿಗಳು ಸಂಬಂಧಿಸಿದ ಕಾಲೇಜಿನಲ್ಲಿ ನಿಗದಿಪಡಿಸಿದ ಶುಲ್ಕಗಳನ್ನು ಪಾವತಿಸಿ ರಶೀದಿ ಪಡೆಯಬೇಕು.
4. ಮಹಾವಿದ್ಯಾಲಯಗಳು ಎಲ್ಲಾ ಸ್ನಾತಕ ತರಗತಿಗಳ ಪ್ರವೇಶ ಮಿತಿ ಸಂಖ್ಯೆಗಳು ವಿಶ್ವವಿದ್ಯಾಲಯ ಅನುಮೋದನೆ ಮಾಡಿದ ಸಂಖ್ಯೆಗೆ ಮೀರಬಾರದು.
5. ಪ್ರಥಮ ಪದವಿ ತರಗತಿಗಳಿಗೆ ಪಡೆದ ಪ್ರವೇಶವು ತಾತ್ಕಾಲಿಕವಾಗಿದ್ದು ಅದು ವಿಶ್ವವಿದ್ಯಾಲಯದ ಅರ್ಹತಾ ಪ್ರಮಾಣ ದೃಢೀಕರಣ ನಂತರವೆ ಖಚಿತಪಡಿಸುವುದು.
6. A) ಕರ್ನಾಟಕ ಸರ್ಕಾರದ ಪಿ.ಯು ಮಂಡಳಿಯಿಂದ ನೇರವಾಗಿ ಪರೀಕ್ಷೆ ಬರೆದು ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಹಾಗೂ ಕರ್ನಾಟಕ ರಾಜ್ಯದಲ್ಲಿನ ICSE/CBSC (10+2) ಶಾಲೆಗಳಿಂದ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದಿಂದ ಯಾವುದೇ ರೀತಿಯ ಪ್ರಮಾಣ ಪತ್ರಗಳ ಅವಶ್ಯಕತೆ ಇಲ್ಲದೇ ಪ್ರವೇಶಾತಿ ಮಾಡಿಕೊಳ್ಳಬಹುದಾಗಿದೆ.

   B) ಕರ್ನಾಟಕ ರಾಜ್ಯದ ಪಿ.ಯು ಬೋರ್ಡ್ ಹೊರತುಪಡಿಸಿ/ ಅನ್ಯ ರಾಜ್ಯದಲ್ಲಿನ ICSE/CBSC (10+2) ಶಾಲೆಗಳಿಂದ ಉತ್ತೀರ್ಣಗೊಂಡ /ಅನ್ಯ ಮಂಡಳಿ/ಹೊರ ರಾಜ್ಯಗಳ/ದೇಶಗಳ ಪರೀಕ್ಷಾ ಮಂಡಳಿಗಳ 10+2/ಡಿಪ್ಲೋಮಾ/ಎರಡು ವರ್ಷದ ಐ.ಟಿ.ಐ/ಜೆ.ಒ.ಡಿ.ಸಿ ರಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ರೂ. 750/– ಶುಲ್ಕವನ್ನು ತುಂಬಿ ವಿಶ್ವವಿದ್ಯಾಲಯದಿಂದ ಅರ್ಹತಾ ಪ್ರಮಾಣ ಪತ್ರ (Eligibility Certificate) ಪಡೆದು ಕಾಲೇಜಿಗೆ ಸಲ್ಲಿಸಿದ ನಂತರವೇ ಪ್ರವೇಶ ಮಾಡಿಸಿಕೊಳ್ಳತಕ್ಕದ್ದು. ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು (ವಿಶ್ವವಿದ್ಯಾಲಯದಿಂದ ಪಡೆದಿರುವ ಅರ್ಹತಾ ಪತ್ರಗಳನ್ನು ಪ್ರವೇಶ ಅನುಮೋದನಾ ಪಟ್ಟಿಯ ಜೊತೆ ಕಡ್ಡಾಯವಾಗಿ ಲಗತ್ತಿಸುವುದು). ಮುಂದುವರೆದು ತತ್ಸಮಾನ ಕೋರ್ಸುಗಳಿಂದ ಪ್ರಥಮ ಪದವಿ ಕೋರ್ಸುಗಳಿಗೆ ಪ್ರವೇಶ ನೀಡಲು ಈ ಕೆಳಗಿನ ಕೋಷ್ಟಕದಂತೆ ಪ್ರವೇಶಾತಿ ನೀಡಲು ಸೂಚಿಸಿದೆ.

| ಕ್ರ.ಸಂ | ತತ್ಸಮಾನ (10+2) ಕೋರ್ಸುಗಳು | ಪ್ರಥಮ ವರ್ಷದ ಸ್ನಾತಕ ಕೋರ್ಸುಗಳ ಪ್ರವೇಶಕ್ಕೆ ವಿತರಿಸುವ ಅರ್ಹತಾ ಪ್ರಮಾಣ ಪತ್ರದ ಕೋರ್ಸ್ ವಿವರ |
|---|---|---|
| 01 | ಐ.ಟಿ.ಐ (10+2) | ಬಿ.ಎ/ಬಿ.ಕಾಂ/ಬಿಬಿಎ/ಬಿ.ಸಿ.ಎ/ಬಿ.ಎಸ್.ಡಬ್ಲ್ಯೂ |
| 02 | ಜೆ.ಓ.ಡಿ.ಸಿ | ಬಿ.ಎ/ಬಿ.ಎಸ್.ಡಬ್ಲ್ಯೂ |
| 03 | ಯಾವುದೇ ಡಿಪ್ಲೋಮಾ | ಬಿ.ಎ/ಬಿ.ಸಿ.ಎ/ಬಿಬಿಎ/ಬಿ.ಎಸ್.ಡಬ್ಲ್ಯೂ |
| 04 | ಡಿಪ್ಲೋಮಾ (ಅಗ್ರಿ) | ಬಿ.ಎ/ಬಿ.ಎಸ್ಸಿ/ಬಿ.ಎಸ್.ಡಬ್ಲ್ಯೂ |
| 05 | ರಾಜ್ಯದ (ಪದವಿ ಪೂರ್ವ ಶಿಕ್ಷಣ ಮಂಡಳಿ ಹಾಗೂ ಕರ್ನಾಟಕ ರಾಜ್ಯದಲ್ಲಿನ ICSE/CBSC (10+2) ಶಾಲೆಗಳಿಂದ ಉತ್ತೀರಣಗೊಂಡ ವಿದ್ಯಾರ್ಥಿಗಳನ್ನು ಹೊರತುಪಡಿಸಿ) ವಿವಿಧ ಶೈಕ್ಷಣಿಕ ಮಂಡಳಿಗಳಿಂದ ತೇರ್ಗಡೆಯಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳು ಪ್ರವೇಶ ಪೂರ್ವದಲ್ಲಿ ಅರ್ಹತಾ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ. | ವಿದ್ಯಾರ್ಥಿ ಬಯಸಿದ ಪ್ರಥಮ ವರ್ಷದ ಪದವಿ ಕೋರ್ಸ್‌ಗೆ ಸದರಿ ವಿದ್ಯಾರ್ಥಿಯ ನಿಕಾಯ ಮತ್ತು ವಿಷಯಕ್ಕೆ ಅನುಗುಣವಾಗಿ ಪ್ರವೇಶ ನೀಡುವುದು. |

C) ಕರ್ನಾಟಕ ರಾಜ್ಯದ ಪದವಿ ಪೂರ್ವ ಶಿಕ್ಷಣ ಮಂಡಳಿ ಹಾಗೂ ಕರ್ನಾಟಕ ರಾಜ್ಯದಲ್ಲಿನ ICSE/CBSC (10+2) ಶಾಲೆಗಳಿಂದ ಉತ್ತೀರ್ಣಗೊಂಡ ವಿದ್ಯಾರ್ಥಿಗಳನ್ನು ಹೊರತುಪಡಿಸಿ/ಅನ್ಯ ಮಂಡಳಿ/ರಾಜ್ಯಗಳ/ದೇಶಗಳ ಪರೀಕ್ಷಾ ಮಂಡಳಿಗಳ 10+2/ಡಿಪ್ಲೋಮಾ/ಎರಡು ವರ್ಷದ ಐ.ಟಿ.ಐ/ಜೆ.ಒ.ಡಿ.ಸಿ ರಲ್ಲಿ ಉತ್ತೀರ್ಣರಾದಲ್ಲಿ, ಅವರು ವಿಶ್ವವಿದ್ಯಾಲಯದಿಂದ ಅರ್ಹತಾ ಪ್ರಮಾಣ ಪತ್ರ (Eligibility Certificate) ವನ್ನು ಪಡೆಯದೇ ಪ್ರವೇಶಾತಿಯನ್ನು ಒದಗಿಸಿದ್ದಲ್ಲಿ ಅಂತಹ ಪ್ರವೇಶಾತಿಗೆ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆ.

7. ಪ್ರಥಮ ಪದವಿ ತರಗತಿಗಳಿಗೆ ಪ್ರವೇಶ ಪಡೆಯುವಾಗ ಸದರಿ ವಿದ್ಯಾರ್ಥಿಯು 10+2 ತರಗತಿಗಳಲ್ಲಿ ಕನ್ನಡ ಭಾಷೆ ವಿಷಯವನ್ನು ಅಧ್ಯಯನ ಮಾಡಿದ್ದರೆ, ಅಂತಹ ವಿದ್ಯಾರ್ಥಿಗಳಿಗೆ ಪ್ರಥಮ ಪದವಿ ತರಗತಿಗಳಿಗೆ ಕನ್ನಡ ಭಾಷೆ ವಿಷಯವನ್ನು ಕಡ್ಡಾಯವಾಗಿ ನೀಡುವುದು. ಆದರೆ 10+2 ತರಗತಿಯಲ್ಲಿ ಕನ್ನಡೇತರ ಭಾಷೆ ವಿಷಯವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಿದ್ದರೆ, ಅಂತಹ ವಿದ್ಯಾರ್ಥಿಗಳು ಮಹಾವಿದ್ಯಾಲಯದಲ್ಲಿ ಲಭ್ಯವಿರುವ ಹಾಗೂ ಸಂವಿಧಾನದ ಶೆಡ್ಯೂಲ್ 8 ರಲ್ಲಿ ನಮೂದಿಸಿದ ಯಾವುದೇ 2 ಭಾಷೆಗಳನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.

8. ಪದವಿ ವ್ಯಾಸಂಗಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಕಡ್ಡಾಯವಾಗಿ ಹಿಂದಿನ ಮಹಾವಿದ್ಯಾಲಯಗಳ ಮೂಲ ವರ್ಗಾವಣೆ ಪತ್ರಗಳನ್ನು ಸಂಬಂಧಪಟ್ಟ ಮಹಾವಿದ್ಯಾಲಯಗಳಿಗೆ ಸಲ್ಲಿಸಬೇಕು.

9. ಸ್ನಾತಕ 3 ಮತ್ತು 5ನೇ ಸೆಮಿಸ್ಟರ್‌ಗೆ ಒಂದು ಮಹಾವಿದ್ಯಾಲಯದಿಂದ ಇನ್ನೊಂದು ಮಹಾವಿದ್ಯಾಲಯಕ್ಕೆ ಅಂತರ ಮಹಾವಿದ್ಯಾಲಯಗಳ ವರ್ಗಾವಣೆ ಮಾಡಿಕೊಳ್ಳುವಾಗ ವಿದ್ಯಾರ್ಥಿ/ನಿಯಿಂದ ಭರ್ತಿ ಮಾಡಿದ ನಿಗದಿತ ಅರ್ಜಿ ನಮೂನೆಯನ್ನು ಪಡೆದುಕೊಳ್ಳುವುದು. ನಂತರ ವಿಶ್ವವಿದ್ಯಾಲಯದಿಂದ ವರ್ಗಾವಣೆ ಆದೇಶ ಪತ್ರ ಬಂದ ಮೇಲೆ ತರಗತಿಗಳಿಗೆ ಅವಕಾಶ ಮಾಡಿಕೊಳ್ಳುವುದು ಹಾಗೂ ಅಂತಹ ವಿದ್ಯಾರ್ಥಿಗಳ ಪಟ್ಟಿಯನ್ನು ಶುಲ್ಕ ಸಹಿತ ಪ್ರತ್ಯೇಕವಾಗಿ ಸಲ್ಲಿಸತಕ್ಕದ್ದು.

10. ಹೊರ ವಿಶ್ವವಿದ್ಯಾಲಯದ ವರ್ಗಾವಣೆ ಪತ್ರ ಪಡೆದು ಪ್ರವೇಶ ಬಯಸುವ (3 ಮತ್ತು 5ನೇ ಸೆಮಿಸ್ಟರ್) ವಿದ್ಯಾರ್ಥಿಗಳ ಪ್ರವೇಶಾತಿಗಳನ್ನು ಕಡ್ಡಾಯವಾಗಿ ವಿಶ್ವವಿದ್ಯಾಲಯದ ಪೂರ್ವಾನುಮತಿಯನ್ನು ಪಡೆದ ನಂತರವೇ ಮಾಡಿಕೊಳ್ಳಬೇಕು. (ಈ ನಿಯಮವನ್ನು ಸ್ವಾಯತ್ತ ಕಾಲೇಜುಗಳು ಸಹ ಅನುಸರಿಸಬೇಕು) ಹಾಗೂ ಭಾಷಾ/ಐಚ್ಛಿಕ ವಿಷಯ ಬದಲಾವಣೆಗೆ ಅವಕಾಶವಿರುವುದಿಲ್ಲ (ವಿಶ್ವವಿದ್ಯಾಲಯದಿಂದ ವಿತರಿಸಿರುವ ಅನುಮತಿ ಪತ್ರವನ್ನು ಕಡ್ಡಾಯವಾಗಿ ಪ್ರವೇಶಾತಿ ಅನುಮೋದನೆ ಸಮಯದಲ್ಲಿ ಲಗತ್ತಿಸಬೇಕು).

11. ವ್ಯಾಸಂಗ ನಿಲುಗಡೆಗೊಂಡ ಹಳೆಯ ವಿದ್ಯಾರ್ಥಿಗಳಿಗೆ ಮರು ಪ್ರವೇಶ ನೀಡುವ ಮುನ್ನ ವಿಶ್ವವಿದ್ಯಾಲಯದ ಪರಿನಿಯಮಾವಳಿಗಳಿಗೆ ಅನುಗುಣವಾಗಿ ವಿಶ್ವವಿದ್ಯಾಲಯದ ಅನುಮತಿ ಪಡೆಯುವುದು ಕಡ್ಡಾಯ, ಅಂತಹ ವಿದ್ಯಾರ್ಥಿಗಳ ಪ್ರತ್ಯೇಕ ಪಟ್ಟಿಯನ್ನು ಶುಲ್ಕ ಸಹಿತ ವಿಶ್ವವಿದ್ಯಾಲಯಕ್ಕೆ ಸಲ್ಲಿಸತಕ್ಕದ್ದು. ಒಂದು ವೇಳೆ ಅನುಮತಿ ಪಡೆಯದೇ ಪ್ರವೇಶ ಮಾಡಿದಲ್ಲಿ ಆಗುವ ತೊಂದರೆಗಳಿಗೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರುಗಳೇ ಹೊಣೆಗಾರರಾಗಿರುತ್ತಾರೆ.

12. ಸರಕಾರ/ವಿಶ್ವವಿದ್ಯಾಲಯ ಮುಂದಿನ ದಿನಗಳಲ್ಲಿ ಈ ಶೈಕ್ಷಣಿಕ ವೇಳಾಪಟ್ಟಿಯನ್ನು ಒಂದು ವೇಳೆ ಬದಲಾವಣೆ ಮಾಡಿದ್ದಲ್ಲಿ ಇದು ಬದಲಾವಣೆಗೆ ಒಳಪಡಬಹುದು.

ವಿಶೇಷ ಸೂಚನೆ:

1. ಪ್ರವೇಶಾತಿಯ ಕಡೆಯ ದಿನಾಂಕಗಳು ಮುಗಿದ ನಂತರ, ಯಾವುದೇ ವಿದ್ಯಾರ್ಥಿಗಳ ಮನವಿಯನ್ನು ವಿಶ್ವವಿದ್ಯಾಲಯಕ್ಕೆ ರವಾನೆ (Forward) ಮಾಡಬಾರದಾಗಿ ಈ ಮೂಲಕ ಕಾಲೇಜುಗಳ ಎಲ್ಲಾ ಪ್ರಾಂಶುಪಾಲರುಗಳಿಗೆ ತಿಳಿಯಪಡಿಸಿದೆ. ಪ್ರವೇಶ ಪ್ರಕ್ರಿಯೆಗಳನ್ನು ಕಡೆಯ ದಿನಾಂಕದೊಳಗೆ ಕಡ್ಡಾಯವಾಗಿ ಪೂರ್ಣಗೊಳಿಸಬೇಕು.
2. ಹಳೆಯ ವಿದ್ಯಾರ್ಥಿಗಳಿಗೆ ಮರು ಪ್ರವೇಶ ನೀಡುವ ಮುನ್ನ Regulation ಗೆ ಅನುಗುಣವಾಗಿ ವಿಶ್ವವಿದ್ಯಾಲಯದ ಅನುಮತಿ ಪಡೆಯುವುದು ಕಡ್ಡಾಯ, ಒಂದು ಪಕ್ಷ ವಿಶ್ವವಿದ್ಯಾಲಯದ ಅನುಮತಿ ಪಡೆಯದೇ ಪ್ರವೇಶ ಮಾಡಿದ ಪಕ್ಷದಲ್ಲಿ, ಮುಂದಿನ ಎಲ್ಲಾ Litigation ಗಳಿಗೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು ನೇರ ಹೊಣೆಗಾರರಾಗುತ್ತಾರೆ ಎಂದು ಸ್ಪಷ್ಟಪಡಿಸಲಾಗಿದೆ.
3. ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದಿಂದ ವಿದ್ಯಾರ್ಥಿ ವೇತನ ಮಂಜೂರಾತಿಗೆ ಅರ್ಹವಿರುವ ಕಾಲೇಜುಗಳು, ವಿದ್ಯಾರ್ಥಿಗಳ ತಂದೆ/ತಾಯಿ/ಪೋಷಕರ ವಾರ್ಷಿಕ ವರಮಾನಕ್ಕೆ ಅನುಗುಣವಾಗಿ(ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಅಧಿಸೂಚನೆಗಳ ಅನುಸಾರ) SC/ST, OBC/LIG ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ನೀಡಬೇಕು, ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳು ಕಡ್ಡಾಯವಾಗಿ ವಿದ್ಯಾರ್ಥಿವೇತನಕ್ಕೆ ನಿಗದಿತ ಸಮಯದಲ್ಲಿ ಸಂಬಂಧಿಸಿದ ಇಲಾಖೆಗೆ ಅರ್ಜಿ ಸಲ್ಲಿಸಬೇಕು ಮತ್ತು ಪ್ರಾಂಶುಪಾಲರು ಸಹ ಅರ್ಜಿ ಸಲ್ಲಿಸಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು. ವಿದ್ಯಾರ್ಥಿವೇತನ ಮಂಜೂರಾಗದಂತಹ ಅಥವಾ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸದ ವಿದ್ಯಾರ್ಥಿಗಳಿಂದ ಪೂರ್ಣ ಪ್ರಮಾಣದ ಶುಲ್ಕವನ್ನು ಪಾವತಿಸಿಕೊಳ್ಳಬೇಕು.

30/09/2020

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ.
2. ಕುಲಸಚಿವರು(ಮೌಲ್ಯಮಾಪನ), ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ.
3. ಹಣಕಾಸು ಅಧಿಕಾರಿಗಳು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ.
4. ಎಲ್ಲಾ ನಿಕಾಯಗಳ ಡೀನರು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ.
5. ನಿರ್ದೇಶಕರು(ಪ್ರಭಾರ), ಕಾಲೇಜು ಅಭಿವೃದ್ಧಿ ಮಂಡಳಿ, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ.
6. ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಘಟಕ, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.
7. ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿಗಳು, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ.
8. ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಎಲ್ಲಾ ಸ್ನಾತಕ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳನ್ನೊಳಗೊಂಡಂತೆ.
9. ಕಛೇರಿ ಪ್ರತಿ.

-----***-----